(3) ನೇ ಕಾಲಂನಲ್ಲಿ ನಿರ್ದಿಷ್ಟಪಡಿಸಿದ ಸರ್ವೆ ನಂಬರುಗಳೊಂದಿಗೆ ಮೇಲಿನ (4) ನೇ ಕಾಲಂನಲ್ಲಿ ಸೂಚಿಸಿರುವ ಭೂಮಿಯ ವ್ಯಾಪ್ತಿಯಲ್ಲಿ ಇರುವ ದಾಖಲಾಗದ ಜನವಸತಿಯನ್ನು **ತುಮಕೂರು** ಜಿಲ್ಲೆಯ **ಗುಬ್ಬಿ** ತಾಲ್ಲೂಕಿನ **ಮಡೇನಹಳ್ಳಿ** ಗ್ರಾಮದ **ಬಸವೇಶ್ವರ ನಗರ** ಸಣ್ಣ ವಸತಿ ಸಮೂಹ ಭಾಗದ ಜನವಸತಿ ಪ್ರದೇಶ (ಗ್ರಾಮಠಾಣಾ) ಎಂಬುದಾಗಿ ಪರಿವರ್ತಿಸಲಾಗಿದೆ ಎಂದು ಈ ಮೂಲಕ ಘೋಷಿಸಿದೆ.

ಮೇಲೆ ನಿರ್ದಿಷ್ಟಪಡಿಸಿದ ಪ್ರಸ್ತಾವನೆಯು, ಕರ್ನಾಟಕ ಭೂಕಂದಾಯ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 12) 5ನೇ ಪ್ರಕರಣದಡಿ ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಬೇಕಾದ ಇದರ ಅಂತಿಮ ಅಧಿಸೂಚನೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

( ಮಾರುತಿ ಎಂ.ಪಿ )
ನಿರ್ದೇಶಕರು,
ಕಂದಾಯ ಗ್ರಾಮಗಳ ರಚನಾ ಕೋಶ
ಹಾಗೂ ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ
ಕಂದಾಯ ಇಲಾಖೆ.

**PR-721**

**ಕರ್ನಾಟಕ ಸರ್ಕಾರ**

ಸಂಖ್ಯೆ: ಕಂಇ/42/ಎಂಎನ್ಎಂಯು/2022
(ಭಾಗ-2)

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಡಾ|| ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:28-09-2026

**ಅಧಿಸೂಚನೆ-1**

ನೋಂದಣಿ ಕಾಯ್ದೆ ಅಧಿನಿಯಮ 1908ರ ಪ್ರಕರಣ 69 (1908ರ ಕೇಂದ್ರ ಅಧಿನಿಯಮ XVI)ರ ಪ್ರಕಾರ ಪ್ರದತ್ತವಾದ ಅಧಿಕಾರದನ್ವಯ ಈಗಾಗಲೇ ರಾಜ್ಯ ಮತ್ತು ಕೇಂದ್ರ ಶಾಸನಗಳ ಕೆಲವು ಉಪಬಂಧಗಳು ನೋಂದಣಿ ಕಾಯ್ದೆ,1908ರಡಿ ನೇಮಕಗೊಂಡ ನೋಂದಣಿ ಅಧಿಕಾರಿಗಳಿಗೆ ರಾಜಸ್ವ ಸೋರಿಕೆಯನ್ನು ಮತ್ತು ಸದರಿ ಶಾಸನಗಳ ಉಪ ಬಂಧಗಳ ಉಲ್ಲಂಘನೆಯನ್ನು ತಡೆಯುವುದಕ್ಕಾಗಿ ಕೆಲವು ದಾಖಲೆ ಮತ್ತು ಪ್ರಮಾಣ ಪತ್ರಗಳನ್ನು ಪಡೆಯುವುದಕ್ಕೆ ಹಾಗೂ ದಸ್ತಾವೇಜುಗಳ ನೋಂದಣಿಗೆ ಸಂಬಂಧಪಟ್ಟ ಸಾರ್ವಜನಿಕರ ಹಕ್ಕು ಮತ್ತು ಬಾಧ್ಯತೆಗಳನ್ನು ಮತು ಸರ್ಕಾರದ ಕಾಯ್ದೆ ನೀತಿಯನ್ನು ಕಾಪಾಡುವ ಹಿತದೃಷ್ಟಿಯಿಂದ ನೋಂದಣಿ (ಕರ್ನಾಟಕ ತಿದ್ದುಪಡಿ) ಕಾಯ್ದೆ, 2023 (ಕರ್ನಾಟಕ ಆಕ್ಟ್ ಸಂಖ್ಯೆ: 47/2024 ದಿನಾಂಕ:22-12-2025 ಮತ್ತು ಕರ್ನಾಟಕ ನೋಂದಣಿ (ನೋಂದಾಯಿತ ದಾಖಲಾತಿಗಳ ನಿರಾಕರಣೆ ಮತ್ತು ರದ್ದತಿ) ನಿಯಮಗಳು 2025ರ ಅಧಿಸೂಚನೆ ಸಂಖ್ಯೆ: ಆರ್‌ಡಿ/42/ಎಂಎನ್ಎಂಯು/2022 (ಭಾಗ-2) ದಿನಾಂಕ:22-12-2025 ರನ್ವಯ ಪ್ರಕರಣ 22-ಬಿ(2)ರ ಮೇರೆಗೆ ನಿಯಮ 4(2)ರಡಿ ದಸ್ತಾವೇಜುಗಳ ನೋಂದಣಿಯನ್ನು ನಿರಾಕರಿಸುವ ಉದ್ದೇಶಗಳಿಗಾಗಿ ಅಧಿಸೂಚನೆ ಹೊರಡಿಸುವ ಅವಶ್ಯಕತೆ ಇರುತ್ತದೆ.

ಆದ್ದರಿಂದ ರಾಜ್ಯ ಮತ್ತು ಕೇಂದ್ರ ಸರ್ಕಾರದ ಶಾಸನಗಳ ಕೆಲವು ಉಪಬಂಧಗಳ ಉಲ್ಲಂಘನೆಯನ್ನು ತಡೆಗಟ್ಟಲು ಜವಾಬ್ದಾರರಾಗಿದ್ದು ದಸ್ತಾವೇಜುಗಳ ನೋಂದಣಿಯ ಮೇಲೆ ಪರಿಣಾಮ ಹೊಂದಿರುವ ರಾಜ್ಯ/ಕೇಂದ್ರ ಶಾಸನಗಳ ಕೆಲವು ಉಪಬಂಧಗಳು ಈ ಕೆಳಗಿನಂತೆ ಇರುತ್ತದೆ. ಆದ್ದರಿಂದ **ನೋಂದಣಿ ಅಧಿಕಾರಿಗಳು ನೋಂದಣಿಗೆ ಹಾಜರುಪಡಿಸುವ ದಸ್ತಾವೇಜು, ನ್ಯಾಯಾಲಯವು ನೀಡುವ ಡಿಕ್ರಿ, ರಾಜೀ ಡಿಕ್ರಿ ಮತ್ತು ಲೋಕ್‌ಅದಲತ್ ಡಿಕ್ರಿ ಮುಂತಾದವುಗಳನ್ನು ಈ ಕೆಳಕಂಡ ನಿಯಮಗಳಂತೆ ನೋಂದಣಿಯಿಂದ ತಿರಸ್ಕರಿಸುವುದು**.

**1. ನೋಂದಣಿ ಕಾಯ್ದೆ 1908 ರ (ನಿಯಮ 171ರಲ್ಲಿ ತಿಳಿಸಿರುವಂತೆ)**

i. **ಕಲಂ 19ರಂತೆ** ದಸ್ತಾವೇಜನ್ನು ನೋಂದಣಿ ಅಧಿಕಾರಿಗೆ ಅರ್ಥವಾಗದ ಭಾಷೆಯಲ್ಲಿ ಮತ್ತು ಸದರಿ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಉಪಯೋಗಿಸುವ ಭಾಷೆಯಲ್ಲಿ ಇದ್ದು ನಿಜ ಅನುವಾದ ಅಥವಾ ದೃಢೀಕೃತ ಪ್ರತಿಯೊಂದಿಗೆ ಹಾಜರುಪಡಿಸದೆ ಇದ್ದಲ್ಲಿ;

ii. **ಕಲಂ 20ರಂತೆ** ದಸ್ತಾವೇಜಿನಲ್ಲಿ ಸಾಲುಗಳ ನಡುವೆ ಬರೆದದ್ದು ಖಾಲಿ ಜಾಗಗಳು, ಅಳಿಸಿರುವ ಅಥವಾ ಬದಲಾವಣೆಗಳಿಗೆ ದೃಢೀಕರಿಸದೆ ಇದ್ದಲ್ಲಿ;

iii. **ಕಲಂ 21(1) ರಿಂದ (3) ಮತ್ತು ಕಲಂ 22ರಂತೆ** ಸ್ವತ್ತಿನ ವಿವರಣೆಯು ಗುರುತಿಸಲು ಅಸಮರ್ಪಕವಾಗಿದ್ದಲ್ಲಿ ಅಥವಾ ನಿಯಮ 15ರಲ್ಲಿ ತಿಳಿಸಿರುವ ಮಾಹಿತಿಯು ಇಲ್ಲದಿದ್ದಲ್ಲಿ;

iv. **ಕಲಂ 21(4)ರಂತೆ** ಸ್ವತ್ತನ್ನು ಗುರುತಿಸಲು ಮ್ಯಾಪ್ ಅಥವಾ ಪ್ಲಾನ್ (ನಕ್ಷೆ) ನೀಡದೆ ಇದ್ದಲಿ ;

v. **ಕಲಂ 23, 24, 25, 26, 72, 75 ಮತ್ತು 77ರಂತೆ** ದಸ್ತಾವೇಜನ್ನು ನಿಗಧಿಪಡಿಸಿದ ಸಮಯಕ್ಕೆ ಹಾಜರುಪಡಿಸದೇ ಇದ್ದಲ್ಲಿ;

vi. **ಕಲಂ 32, 33, 40 ಮತ್ತು 43ರಂತೆ** ಅಧಿಕಾರ ಇಲ್ಲದೇ ಇರುವ ವ್ಯಕ್ತಿಯಿಂದ ದಸ್ತಾವೇಜನ್ನು ಹಾಜರುಪಡಿಸಿದ್ದಲ್ಲಿ;

vii. **ಕಲಂ 34ರಂತೆ** ಪತ್ರ ಬರೆದುಕೊಡುವವರು ಅಥವಾ ಅವರಿಂದ ಅಧಿಕಾರ ಪಡೆದವರು ನೇಮಿಸಿದವರು ಅಥವಾ ಪ್ರತಿನಿಧಿಸಿದವರು ನಿಗಧಿಪಡಿಸಿರುವ ಸಮಯಕ್ಕೆ ಹಾಜರಾಗದೆ ಇದ್ದಲ್ಲಿ;

viii. **ಕಲಂ 33 ಮತ್ತು 33(4)** ನಿಯಮದಂತೆ ಅಧಿಕಾರ ಪತ್ರ ಬರೆದುಕೊಟ್ಟವರ ಜೀವಿತದ ಬಗ್ಗೆ ನಿಯಮದಂತೆ ದಾಖಲೆ ನೀಡದೆ ಇದ್ದಲ್ಲಿ;

ix. **ಕಲಂ 34 ಮತ್ತು 40ರಂತೆ** ಪ್ರತಿನಿಧಿ, ಏಜೆಂಟ್ ಅಥವಾ ಹಕ್ಕುಸ್ವಾಮ್ಯ ಪಡೆದ ವ್ಯಕ್ತಿ ಎಂದು ಹಾಜರಾಗುವ ವ್ಯಕ್ತಿಯ ಬಗ್ಗೆ ನೋಂದಣಿ ಅಧಿಕಾರಿಗೆ ತೃಪ್ತಿಯಾಗದಿದ್ದರೆ;

x. **ಕಲಂ 35 ರಂತೆ** ದಸ್ತಾವೇಜನ್ನು ಬರೆದುಕೊಟ್ಟಿದ್ದಾನೆಂದು ಹೇಳಲಾಗಿರುವ ಮೃತ ವ್ಯಕ್ತಿಯ ಪ್ರತಿನಿಧಿ ಅಥವಾ ಹಕ್ಕುದಾರನು ಆ ದಸ್ತಾವೇಜಿನ ಬರೆದುಕೊಟ್ಟಿರುವುದನ್ನು ನಿರಾಕರಿಸಿದಲ್ಲಿ;

**ಟಿಪ್ಪಣಿ**.– ಮೃತ ನಿರ್ವಹಕರ ಕೆಲವು ಪ್ರತಿನಿಧಿಗಳು ದಸ್ತಾವೇಜಿನ ನಿರ್ವಹಣೆಯನ್ನು ಒಪ್ಪಿಕೊಂಡು, ಇತರರು ಅದನ್ನು ನಿರಾಕರಿಸಿದ್ದಲ್ಲಿ, ಆ ದಸ್ತಾವೇಜಿನ ನೋಂದಣಿಯನ್ನು ಸಂಪೂರ್ಣವಾಗಿ ನಿರಾಕರಿಸಬೇಕು. ಈ ಸಂದರ್ಭದಲ್ಲಿ ಸಂಬಂಧಪಟ್ಟ ಆಸಕ್ತ ವ್ಯಕ್ತಿಗಳು ನಿರ್ವಹಣೆಯ ವಿಷಯದ ಬಗ್ಗೆ ತನಿಖೆ ನಡೆಸುವಂತೆ ನೋಂದಣಾಧಿಕಾರಿಗೆ ಅರ್ಜಿ ಸಲ್ಲಿಸಬಹುದು.

xii. **ಕಲಂ 35 ಮತ್ತು 41 ರಂತೆ** ದಸ್ತಾವೇಜನ್ನು ನಿರ್ವಹಿಸಿದ್ದಾನೆಂದು ಹೇಳಲಾಗಿರುವ ವ್ಯಕ್ತಿಯ ಮರಣವಾಗಿದೆ ಎಂಬುದನ್ನು ಸಾಬೀತುಪಡಿಸಲಾಗದಿದ್ದಲ್ಲಿ;

xiii. **ಕಲಂ 41 ರಂತೆ** ಮರಣ ಶಾಸನ ಪತ್ರ ಅಥವಾ ದತ್ತು ಪಡೆಯುವ ಅಧಿಕಾರ ಪತ್ರವನ್ನು ಬರೆದುಕೊಡುವವನ ಅಥವಾ ಕರ್ತನ ಮರಣದ ನಂತರ ಮಂಡಿಸಿದ ಸಂದರ್ಭದಲ್ಲಿ, ಅದರ ನಿರ್ವಹಣೆ ನಡೆದಿರುವ ಬಗ್ಗೆ ನೋಂದಣಾಧಿಕಾರಿಗೆ ಸಮಾಧಾನವಾಗದಿದ್ದಲ್ಲಿ;

xiv. **ಕಲಂ 25, 34 ಮತ್ತು 80**.– ದಸ್ತಾವೇಜನ್ನು ನೋಂದಣಿಗೆ ಅಂಗೀಕರಿಸುವ ಮೊದಲು ವಿಧಿಸಬೇಕಾದ ನಿಗದಿತ ಶುಲ್ಕ, ದಂಡ ಅಥವಾ ಯಾವುದೇ ಇತರೆ ಕಾಯ್ದೆಯಡಿ ವಿಧಿಸಬೇಕಾದ ಶುಲ್ಕವನ್ನು ಪಾವತಿಸದಿದ್ದಲ್ಲಿ;

**2. ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 131(ಸಿ)**ರ ಜೊತೆಗೆ ಓದಲಾದ ಕರ್ನಾಟಕ ಭೂ ಕಂದಾಯ ನಿಯಮಗಳು, 1966, ನಿಯಮ 46-ಎಚ್ ರಂತೆ ಜಮೀನಿನ ಸರ್ವೆ ಸ್ಕೆಚ್ ಅಥವಾ ಭೂ ಮಾಪನ ನಕ್ಷೆ ನಿಗದಿತ ನಮೂನೆ 11-ಇ ರನ್ವಯ ನೀಡದೆ ಇದ್ದಲ್ಲಿ.

**3. ಕರ್ನಾಟಕ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ (ಕೆಲವು ಜಮೀನುಗಳ ಪರಭಾರೆ ನಿಷೇಧ) ಕಾಯ್ದೆ, 1978ರ ಕಲಂ 6** ರಂತೆ ಪರಭಾರೆ/ನೋಂದಣಿ ನಿಷೇದಕ್ಕೆ ಒಳಪಟ್ಟ ಜಮೀನಾಗಿದ್ದಲ್ಲಿ.

**4. ಕರ್ನಾಟಕ ಭೂ (ಪರಭಾರೆ ನಿರ್ಬಂಧ) ಕಾಯ್ದೆ, 1991ರ ಕಲಂ 8** ರಂತೆ ನಗರಾಭಿವೃದ್ಧಿ ಸಕ್ಷಮ ಪ್ರಾಧಿಕಾರಿಗಳಿಂದ ಸ್ವಾಧೀನ ಪ್ರಕ್ರಿಯೆಗೆ ಒಳಪಟ್ಟ ಜಮೀನಾಗಿದ್ದಲ್ಲಿ ಅಂದರೆ ಪರಭಾರೆ/ನೋಂದಣಿ ನಿಷೇದಕ್ಕೆ ಒಳಪಟ್ಟ ಜಮೀನಾಗಿದ್ದಲ್ಲಿ.

**5. ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಕಾಯ್ದೆ, 2007ರ ಕಲಂ 192-ಎ, 192-ಬಿ ಮತ್ತು 192-ಸಿ** ರಂತೆ ಸರ್ಕಾರಿ ಜಮೀನು ಮತ್ತು ಪರಭಾರೆ ನಿಷೇದಕ್ಕೆ ಒಳಪಟ್ಟ ಜಮೀನಾಗಿದ್ದಲ್ಲಿ.

**6. ಕರ್ನಾಟಕ ಭೂ ಸುಧಾರಣಾ ಕಾಯ್ದೆ, 1961 ರ ಕಲಂ 81-ಎ** ರಂತೆ ಹೆಚ್ಚುವರಿ ಜಮೀನನ್ನು ಹೊಂದಿರುವುದಿಲ್ಲವೆಂದು ನಿಗಧಿತ ನಮೂನೆಯಲ್ಲಿ ಘೋಷಣೆ ನೀಡದಿದ್ದಲ್ಲಿ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಸುನೀತಾ.ಎಸ್)**
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ
(ನೋಂದಣಿ ಮತ್ತು ಮುದ್ರಾಂಕ, ವಿಪತ್ತು ನಿರ್ವಹಣೆ)

**ಕರ್ನಾಟಕ ಸರ್ಕಾರ**

ಸಂಖ್ಯೆ: ಕಂಇ/42/ಎಂಎನ್ಎಂಯು/2022
(ಭಾಗ-2)

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಡಾ|| ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:28-09-2026

**ಅಧಿಸೂಚನೆ-2**

ನೋಂದಣಿ ಕಾಯ್ದೆ ಅಧಿನಿಯಮ 1908ರ ಪ್ರಕರಣ 69 (1908ರ ಕೇಂದ್ರ ಅಧಿನಿಯಮ XVI)ರ ಪ್ರಕಾರ ಪ್ರದತ್ತವಾದ ಅಧಿಕಾರದನ್ವಯ ಈಗಾಗಲೇ ರಾಜ್ಯ ಮತ್ತು ಕೇಂದ್ರ ಶಾಸನಗಳ ಕೆಲವು ಉಪಬಂಧಗಳು ನೋಂದಣಿ ಕಾಯ್ದೆ,1908ರಡಿ ನೇಮಕಗೊಂಡ ನೋಂದಣಿ ಅಧಿಕಾರಿಗಳಿಗೆ ರಾಜಸ್ವ ಸೋರಿಕೆಯನ್ನು ಮತ್ತು ಸದರಿ ಶಾಸನಗಳ ಉಪಬಂಧಗಳ ಉಲ್ಲಂಘನೆಯನ್ನು ತಡೆಯುವುದಕ್ಕಾಗಿ ಕೆಲವು ದಾಖಲೆ ಮತ್ತು ಪ್ರಮಾಣ ಪತ್ರಗಳನ್ನು ಪಡೆಯುವುದಕ್ಕೆ ಹಾಗೂ ದಸ್ತಾವೇಜುಗಳ ನೋಂದಣಿಗೆ ಸಂಬಂಧಪಟ್ಟ ಸಾರ್ವಜನಿಕರ ಹಕ್ಕು ಮತ್ತು ಬಾಧ್ಯತೆಗಳನ್ನು ಮತು ಸರ್ಕಾರದ ಕಾಯ್ದೆ ನೀತಿಯನ್ನು ಕಾಪಾಡುವ ಹಿತದೃಷ್ಟಿಯಿಂದ ಹಾಗೂ ನೋಂದಣಿ ತಂತ್ರಾಂಶದ ವ್ಯವಸ್ಥೆಯೊಂದಿಗೆ ಸಕ್ಷಮ ಪ್ರಾಧಿಕಾರಗಳು ನಿರ್ವಹಿಸುವ ವಿದ್ಯುನ್ಮಾನ ಸಂಯೋಜನೆ ಮುಖಾಂತರ ಸಂಯೋಜನೆಗೆ ಈಗಾಗಲೆ ಈ ಕೆಳಗೆ ತಿಳಿಸಿರುವಂತೆ ಹಲವಾರು ಸುತ್ತೋಲೆಗಳನ್ನು ಹೊರಡಿಸಲಾಗಿರುತ್ತದೆ.

ನೋಂದಣಿ (ಕರ್ನಾಟಕ ತಿದ್ದುಪಡಿ) ಕಾಯ್ದೆ, 2023 (ಕರ್ನಾಟಕ ಆಕ್ಟ್ ಸಂಖ್ಯೆ: 47/2024) ದಿನಾಂಕ: 22-12-2025 ಪ್ರಕರಣ **22-ಬಿ (4)**ರ ಮತ್ತು ಕರ್ನಾಟಕ ನೋಂದಣಿ (ನೋಂದಾಯಿತ ದಾಖಲಾತಿಗಳ ನಿರಾಕರಣೆ ಮತ್ತು ರದ್ದತಿ) ನಿಯಮಗಳು 2025ರ ಅಧಿಸೂಚನೆ ಸಂಖ್ಯೆ: ಆರ್‌ಡಿ/42/ಎಂಎನ್ಎಂಯು/2022 (ಭಾಗ-2) ದಿನಾಂಕ:22-12-2025 ರ **ನಿಯಮ 6(1)** ರಡಿ ದಸ್ತಾವೇಜುಗಳ ನೋಂದಣಿಯನ್ನು ನೋಂದಣಿ ಅಧಿಕಾರಿಗಳು ತಿರಸ್ಕರಿಸುವ / ಅನುಸರಿಸುವ ಉದ್ದೇಶಗಳಿಗಾಗಿ ಕೆಳಕಂಡ ಸುತ್ತೋಲೆಗಳಿಗೆ ಸಂಬಂಧಿಸಿದಂತೆ ಅಧಿಸೂಚನೆ ಹೊರಡಿಸುವ ಅವಶ್ಯಕತೆ ಇರುತ್ತದೆ.